# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1150
ಮಾನ್ಯ ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 16-12-2025
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರತಿದಿನ ಎಷ್ಟು ಟನ್ ಕಸ ಸಂಗ್ರಹಣೆಯಾಗುತ್ತಿದೆ; ಎಷ್ಟು ಟನ್ ಕಸ ವಿಲೇವಾರಿ ಆಗುತ್ತಿದೆ; | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ 7389 ಟನ್ (ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊರತುಪಡಿಸಿ) ಸಂಗ್ರಹವಾಗುತ್ತಿದ್ದು, 6180 TPD ಯಷ್ಟು ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ. |
| ಆ) | ಪರಿಸರಕ್ಕೆ ಹಾನಿ ಉಂಟು ಮಾಡುವ ಘನ ಹಾಗೂ ದ್ರವ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದ ಕಾರಣಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ದಂಡ ವಿಧಿಸಿರುವುದು ನಿಜವೇ; ಎಷ್ಟು ದಂಡ ವಿಧಿಸಿದೆ; | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾರಂಪರಿಕ ತ್ಯಾಜ್ಯ ನಿರ್ವಹಣೆ ಮತ್ತು ಕೊಳಚೆ ನೀರು ನಿರ್ವಹಣೆ ಸಂಸ್ಕರಣೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಪ್ರಕರಣ ಸಂಖ್ಯೆ OA no. 606/2018 ರಲ್ಲಿ ರೂ. 2900 ಕೋಟಿಗಳ ಪರಿಸರ ಪರಿಹಾರ (Environmental Compensation) ನಿಧಿಯನ್ನು ವಿಧಿಸಿದೆ. |
| ಇ) | ಕಸ ಸಮರ್ಪಕವಾಗಿ ವಿಲೇವಾರಿ ಮಾಡಲು ಏಕೆ ಸಾಧ್ಯವಾಗುತ್ತಿಲ್ಲ; ರಾಜ್ಯಾದ್ಯಂತ ವೈಜ್ಞಾನಿಕವಾಗಿ ಕಸ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು; | • ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿ ದಿನ 7389 ಟನ್‌ಗಳಷ್ಟು ತ್ಯಾಜ್ಯ ಸಂಗ್ರಹವಾಗುತ್ತಿದ್ದು, 6180 TPD ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ. ನಗರಗಳಲ್ಲಿ ಮೂಲ ಸೌಕರ್ಯ ಕೊರತೆ ಮತ್ತು ಮಾನವ ಸಂಪನ್ಮೂಲದ ಕೊರತೆಯಿಂದಾಗಿ ಸಮರ್ಪಕ ತ್ಯಾಜ್ಯ ವಿಲೇವಾರಿ ಕಷ್ಟಸಾಧ್ಯವಾಗಿರುತ್ತದೆ. ಆದರೆ ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಯೋಜನಾ ವರದಿಯನ್ನು ಸಿದ್ಧಪಡಿಸಿ, ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿ ಅನುಮೋದಿಸಿ, ಕೆ.ಟಿ.ಪಿ.ಪಿ. ನಿಯಮಾವಳಿಗಳ ರೀತ್ಯಾ ಟೆಂಡರ್ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br>• ನಗರ ಸ್ಥಳೀಯ ಸಂಸ್ಥೆಗಳು ತ್ಯಾಜ್ಯ ಸಂಗ್ರಹಣೆ ಮತ್ತು ಸಾಗಣಿಕೆಗೆ ವಾಹನಗಳು ಹಾಗೂ ಯಂತ್ರೋಪಕರಣಗಳು ಖರೀದಿಸಿವೆ. ಹಾಗೆಯೇ, ತ್ಯಾಜ್ಯ ಸಂಸ್ಕರಣೆಗೆ ವಿಂಡ್ರೋ ಪ್ಲಾಟ್‌ಫಾರ್ಮ್ (Windrow Platform), ಟ್ರಾಮೆಲ್ ಸ್ಕ್ರೀನ್ (Trommel Screen), ಪ್ರೋಸೆಸಿಂಗ್ ಶೆಡ್ (Processing Shed), ಲೀಚೇಟ್ ಟ್ರೀಟ್‌ಮೆಂಟ್ ಸಿಸ್ಟಮ್ (Leachate Treatment |

| | | |
|---|---|---|
| | | System), ಸ್ಯಾನಿಟರಿ ಲ್ಯಾಂಡ್‌ಫಿಲ್ (Sanitary Landfill), ಕಾಂಪೌಂಡ್ ಗೋಡೆ, ವೇ-ಬ್ರಿಡ್ಜ್ (Weigh bridge), ಸಂಪರ್ಕ ರಸ್ತೆ ಮತ್ತು ಒಳ ರಸ್ತೆಗಳು ಸೇರಿದಂತೆ ಇತರ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ.<br>• ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಜೊತೆಗೆ ಅಗತ್ಯವಿರುವ ಪೌರಕಾರ್ಮಿಕೇತರ ಸಿಬ್ಬಂದಿಗಳನ್ನು ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸಿ, ಅನುಮೋದನೆ ಪಡೆದು ಹೊರಗುತ್ತಿಗೆ ಮೂಲಕ ಪಡೆಯಲು ಸರ್ಕಾರದ ಆದೇಶ ಸಂಖ್ಯೆ: ನಅಇ 225 ಸಿಎಸ್‌ಎಸ್ 2019, ದಿನಾಂಕ: 22-08-2019 ರಲ್ಲಿ ಅವಕಾಶ ಕಲ್ಪಿಸಲಾಗಿದೆ. ಅದರಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಗತ್ಯವಿರುವ ಮಾನವ ಸಂಪನ್ಮೂಲವನ್ನು ಪಡೆದು ತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿದೆ. |
| ಈ) | ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಕಸ ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕಸ ವಿಲೇವಾರಿಗೆ ಟೆಂಡರ್ ಕರೆಯಲಾಗಿದೆಯೇ; ಪ್ರತಿ ಜಿಲ್ಲೆಯಲ್ಲಿ ಯಾರಿಗೆ ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ? (ಸಮಗ್ರ ವಿವರ ನೀಡುವುದು) | • ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಘನ ತ್ಯಾಜ್ಯ ನಿರ್ವಹಣೆ ನಿಯಮಗಳು, 2016 ರನ್ವಯ, ರಾಜ್ಯ ಸರ್ಕಾರವು ಘನತ್ಯಾಜ್ಯ ನಿರ್ವಹಣೆ ರಾಜ್ಯನೀತಿ ಮತ್ತು ಕಾರ್ಯತಂತ್ರವನ್ನು ಜಾರಿಗೊಳಿಸಿದೆ. ಜೊತೆಗೆ ಮಾದರಿ ಘನತ್ಯಾಜ್ಯ ನಿರ್ವಹಣೆ ಬೈಲಾಗಳನ್ನು ಕೂಡ ಜಾರಿಗೆ ತರಲಾಗಿದೆ.<br>• ಮಾದರಿ ಬೈಲಾಗಳ ಪ್ರಕಾರ, ಪ್ರತಿ ತ್ಯಾಜ್ಯ ಉತ್ಪಾದಕರಿಗೆ ಮಾಸಿಕ SWM ಬಳಕೆದಾರರ ಶುಲ್ಕ (User Fee) ನಿಗದಿಪಡಿಸಲಾಗಿದೆ. ಹಾಗೆಯೇ, ಮೂಲದಲ್ಲಿ ತ್ಯಾಜ್ಯ ವಿಂಗಡಿಸದಿರುವುದು, ಕಸವನ್ನು ಎಲ್ಲೆಂದರಲ್ಲಿ ಎಸೆಯುವುದು ಅಥವಾ ಸುಡುವುದು ಕಂಡು ಬಂದರೆ, ನಿಯಮ ಉಲ್ಲಂಘನೆ ಮಾಡಿದವರ ವಿರುದ್ಧ ದಂಡ ವಿಧಿಸುವ ಅವಕಾಶವನ್ನು ಮಾದರಿ ಬೈಲಾಗಳಲ್ಲಿ ಕಲ್ಪಿಸಲಾಗಿದೆ.<br>• ಹಲವಾರು ವರ್ಷಗಳಿಂದ ನಗರಗಳಲ್ಲಿ ಶೇಖರಣೆಯಾಗಿರುವ ಪಾರಂಪರಿಕ ತ್ಯಾಜ್ಯ (Legacy Waste) ಸಂಸ್ಕರಣೆಗೆ (Bioremediation) ಯೋಜನಾ ವರದಿಗಳನ್ನು ಸಿದ್ಧಪಡಿಸಿ, ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿಯ ಅನುಮೋದನೆ ಪಡೆದು, ಕೆ.ಟಿ.ಪಿ.ಪಿ. (KTPP) ನಿಯಮಾನುಸಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br>• ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾತ್ರವನ್ನು ಸಕ್ರಿಯಗೊಳಿಸಲು ಮತ್ತು ಜಾಗೃತಿ ಮೂಡಿಸಲು, ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ವಿವಿಧ ಐ.ಇ.ಸಿ (Information, Education, and Communication) ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.<br>• ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಪ್ರತಿನಿಧಿಗಳು, |

| | | |
|---|---|---|
| | | ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರು ಮತ್ತು ಸ್ವಚ್ಛತಾ ಕೆಲಸಗಾರರ ಸಾಮರ್ಥ್ಯವನ್ನು ವೃದ್ಧಿಸಲು ನಗರ ಸ್ಥಳೀಯ ಸಂಸ್ಥೆ ಹಾಗೂ ರಾಜ್ಯ ಮಟ್ಟದಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>• ರಾಜ್ಯದ ನಗರ ಪ್ರದೇಶಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ, ವಿಲೇವಾರಿ ಮಾಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>• ರಾಜ್ಯದಲ್ಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹೊರತುಪಡಿಸಿ 222 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಡಂಪ್ ಸೈಟ್‌ಗಳನ್ನು ಗುರುತಿಸಿದ್ದು, ಅಲ್ಲಿ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯದ ಒಟ್ಟು ಪ್ರಮಾಣ 78.26 ಲಕ್ಷ ಟನ್‌ಗಳಷ್ಟಿರುತ್ತದೆ. ಇದುವರೆವಿಗೂ 22.7 ಲಕ್ಷ ಟನ್‌ಗಳಷ್ಟು ಪಾರಂಪರಿಕ ತ್ಯಾಜ್ಯವನ್ನು Bio-remediation ಮೂಲಕ ವಿಲೇವಾರಿ ಮಾಡಲಾಗಿರುತ್ತದೆ.<br>• ಸದರಿ 222 ನಗರಗಳು ಸಿದ್ಧಪಡಿಸಿದ ಡಿ.ಪಿ.ಆರ್. ಗಳಿಗೆ ರಾಜ್ಯ ಉನ್ನತಾಧಿಕಾರಯುಕ್ತ ಸಮಿತಿ ಅನುಮೋದನೆ ಪಡೆಯಲಾಗಿದೆ. 20,000 ಟನ್ ಗಳಿಗಿಂತ ಕಡಿಮೆ ಪ್ರಮಾಣದ ಪಾರಂಪರಿಕ ತ್ಯಾಜ್ಯ ಹೊಂದಿದ 124 ನಗರಗಳಲ್ಲಿ in house ಮಾದರಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವತಿಯಿಂದಲೇ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ ಮತ್ತು 20,000 ಟನ್ ಗಳಿಗಿಂತ ಹೆಚ್ಚು ತ್ಯಾಜ್ಯ ಹೊಂದಿದ 98 ನಗರಗಳಲ್ಲಿ hire model ಅನುಸರಿಸಿ ಟೆಂಡರ್ ಕರೆದು ಏಜೆನ್ಸಿ ಮುಖಾಂತರ ನಿರ್ವಹಣೆ ಮಾಡಲಾಗುತ್ತಿದೆ.<br>• ಪಾರಂಪರಿಕ ತ್ಯಾಜ್ಯ ನಿರ್ವಹಣೆಗೆ ಎಲ್ಲಾ 98 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಟೆಂಡರ್ ಕರೆಯಲಾಗಿದೆ, 80 ನಗರ ಸ್ಥಳೀಯ ಸಂಸ್ಥೆಗಳು ಕಾರ್ಯಾದೇಶ ನೀಡಿ ವಿವಿಧ ಹಂತಗಳಲ್ಲಿ ಪ್ರಗತಿ ಸಾಧಿಸುತ್ತಿವೆ. ಸದರಿ ನಗರ ಸ್ಥಳೀಯ ಸಂಸ್ಥೆಗಳು ನೀಡಿರುವ ಕಾರ್ಯಾದೇಶದ ಮೊತ್ತದ ವಿವರವನ್ನು **ಅನುಬಂಧ** ದಲ್ಲಿ ಒದಗಿಸಿದೆ. |

(ಕಡತ ಸಂಖ್ಯೆ: ನಅಇ 266 ಸಿಎಸ್‌ಎಸ್ 2025)

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ-1

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 1 | Bagalkote | Hire Model | Bagalkote | Work Completed | 199.43 | Eagle Services |
| 2 | Bagalkote | Hire Model | Ilkal | Work In Progress | 191.96 | Neptune Automation |
| 3 | Bagalkote | Hire Model | Jamakhandi | Work In Progress | 143.43 | Zakiriya Azad, Nepture Automation, Nasiyanur Erode, Tamil Nadu. |
| 4 | Bagalkote | Hire Model | Rabkavi Banahatti | Work Completed | 160 | Eagle Services |
| 5 | Ballary | Hire Model | Ballari | Work In Progress | 1908 | SHAILA CHETAN CONTRACTOR (1)( SAURASHTRA ENVIRO PROJECTS PRIVATE LIMITED ) |
| 6 | Belagavi | Hire Model | Belgaum | Work In Progress | 1383.78 | Saurashtra Enviro Projects Private Limited |
| 7 | Belagavi | Hire Model | Konnur | Work Completed | 25 | Ashok Hulikatti, Gokak belagavi |
| 8 | Belagavi | Hire Model | Sankeshwar | Work In Progress | 178.63 | M S Dargashetti |
| 9 | Bengaluru Rural | Hire Model | Doddaballapur | Work In Progress | 364.67 | M/s Neptune Automation Valikkal Road, Pallipalayam, Nasiyanur Post, Erode, Tamilnadu |
| 10 | Bengaluru Urban | Hire Model | Anekal | Work Completed | 85.47 | Eagle Services |
| 11 | Bidar | Hire Model | Basavakalyan | Work Completed | 364 | Pradeep hanumanth Jadhav, Flat no 7, Vedant Residency SR No 18/3A, Gondhale Nagar Hadapsar, Pune-411028 |

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 12 | Bidar | Hire Model | Bhalki | Work In Progress | 191 | JAN ADHAR SEVABHAVI SANSTHA , LATUR |
| 13 | Bidar | Hire Model | Bidar | Work Completed | 568 | Pradeep hanumanth Jadhav, Flat no 7, Vedant Residency SR No 18/3A, Gondhale Nagar Hadapsar, Pune-411028 |
| 14 | Chikkaballapura | Hire Model | Bagepalli | Work In Progress | 128.4 | Sourasthra Enviro Project Pvt Ltd |
| 15 | Chikkaballapura | Hire Model | Chikkaballapura | Work In Progress | 321.92 | Sourasthra Enviro Project Pvt Ltd |
| 16 | Chikkaballapura | Hire Model | Chintamani | Work In Progress | 295.77 | Sourasthra Enviro Project Pvt Ltd |
| 17 | Chikkaballapura | Hire Model | Gowribidanur | Work In Progress | 139.27 | Sourasthra Enviro Project Pvt Ltd |
| 18 | Chikkaballapura | Hire Model | Sidlaghatta | Work In Progress | 162.06 | Sourasthra Enviro Project Pvt Ltd |
| 19 | Chikkamagaluru | Hire Model | Chikkamagaluru | Work In Progress | 480.32 | Manishekaran G, Sookamanjipuram, Karaikudi, Tamilnadu |
| 20 | Chikkamagaluru | Hire Model | Tarikere | Work In Progress | 312.53 | M/s Neptune Automation Valikkal Road, Pallipalayam, Nasiyanur Post, Erode, Tamilnadu |
| 21 | Chitradurga | Hire Model | Challkere | Work Order Issued | 292.8 | M/S Vistacore InfraProjects PVT LTD, Flat No.1, Plot No.21, High Gate, Neelanjali Society, Kalyani, Nagar , Pune-411006 |
| 22 | Chitradurga | Hire Model | Chitradurga | Work Order Issued | 790.23 | |
| 23 | Chitradurga | Hire Model | Hiriyur | Work Order Issued | 229.03 | |

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 24 | Dakshina kannada | Hire Model | Mangaluru | Work In Progress | 5638.527 | M/s. National Federation of Farmer's Procurement Processing (NACOF)<br><br>& Retailing Co-operatives of India Ltd. (NACOF)<br><br>Sri-Datta Sai Complex, B Block, 3rd Floor, #312,<br><br>Opp. Sapthagiri Theatre, RTC X Road, Hyderabad, 500020 |
| 25 | Dakshina kannada | Hire Model | Puttur | Work In Progress | 300.45 +GST | Nithyanand, M/s MSGP Infratech Pvt Ltd Blore |
| 26 | Davangere | Hire Model | Davanagere | Work In Progress | 1919.41 | Name : Sri Hardhik Bhikabhai Khunt (D H Patel), Address : # 305-306, Ratna Sagar Apartment, Near Varachha Police Station, Varachha Road, Surat - 395006, Gujrat, India |
| 27 | Davangere | Hire Model | Harihar | Work Completed | 215.64 | M/S Jan-Adhar Sevabhavi Sanstha |
| 28 | Dharwada | Hire Model | Alnavara | Work Completed | 90.42 | JMS Biotech Private limited |
| 29 | Dharwada | Hire Model | Annigeri | Work Completed | 98.64 | JMS Biotech Private limited |
| 30 | Dharwada | Hire Model | Hubli-Dharwad | Work In Progress | 3066 | D H PATEL ,Surat |
| 31 | Dharwada | Hire Model | Kalaghatagi | Work Completed | 57.54 | JMS Biotech Private limited |

| Sl. No . | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 32 | Dharwada | Hire Model | Kundgol | Work Completed | 41.1 | JMS Biotech Private limited |
| 33 | Dharwada | Hire Model | Navalgund | Work Completed | 148.78 | JMS Biotech Private limited |
| 34 | Gadaga | Hire Model | Gadag-Betageri | Work In Progress | 796.17 | Subbarao (Saurastra Env pvt ltd) |
| 35 | Gadaga | Hire Model | Gajendragad | Work In Progress | | |
| 36 | Gadaga | Hire Model | Naragunda | Work In Progress | | |
| 37 | Kalaburagi | Hire Model | Afzalpur | Work In Progress | 2.66 | Naptune Automation |
| 38 | Kodagu | Hire Model | Kushalnagara | Work In Progress | 291 | Utkarsh Balasahaeb Patel Vistacore infraprojects pvt Ltd falt no 1 high gate plot no 21 neelanajli housing society kalyangar pune-411006 |
| 39 | Kodagu | Hire Model | Madikeri | Work In Progress | 544 | |
| 40 | Kodagu | Hire Model | Virajpet | Work In Progress | 247 | |
| 41 | Kolar | Hire Model | Bangarapet | Work Order Issued | 244.86 | Utkarsh Balasahaeb Patel Vistacore infraprojects pvt Ltd falt no 1 high gate plot no 21 neelanajli housing society kalyangar pune-411006 |
| 42 | Kolar | Hire Model | Kolar | Work Order Issued | 346.74 | |
| 43 | Kolar | Hire Model | Malur | Work Order Issued | 168.25 | |
| 44 | Kolar | Hire Model | Mulabagal | Work In Progress | 284.21 | |
| 45 | Kolar | Hire Model | Robertsonpet | Work In Progress | 315.22 | |
| 46 | Koppala | Hire Model | Gangavathi | Work Completed | 297 | M/S Jan-Adhar Sevabhavi Sanstha |
| 47 | Koppala | Hire Model | Koppala | Work Order Issued | 478.65 | Nithin Agarwal UP |
| 48 | Mandya | Hire Model | Mandya | Work In Progress | 519.39 | SLN cleaning services |
| 49 | Mysuru | Hire Model | Mysuru | Work In Progress | 6192 | D H Patel |
| 50 | Mysuru | Hire Model | Hunsur | Work In Progress | 2.03 | Neptune Automation |

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 51 | Raichuru | Hire Model | Raichuru | Work In Progress | 801.22 | Saurashtra enviro projects private limited |
| 52 | Raichuru | Hire Model | Sindhanoor | Work In Progress | | Saurashtra |
| 53 | Shivamogga | Hire Model | Bhadravathi | Work Order Issued | 800 | MILIND HARISHCHANDRA PAWAR( AADARSH BHARAT ENVIRO PRIVATE LIMITED ) |
| 54 | Shivamogga | Hire Model | Sagar | Work Order Issued | 250 | MILIND HARISHCHANDRA PAWAR( AADARSH BHARAT ENVIRO PRIVATE LIMITED ) |
| 55 | Shivamogga | Hire Model | Shivamogga | Work Completed | 215 | M/s Neptune Automation Valikkal Road, Pallipalayam, Nasiyanur Post, Erode, Tamilnadu |
| 56 | Tumakuru | Hire Model | Kunigal | Work In Progress | 178.72 | NACOF Bengaluru |
| 57 | Tumakuru | Hire Model | Madhugiri | Work In Progress | 172 | NACOF Bengaluru |
| 58 | Tumakuru | Hire Model | Pavagada | Work In Progress | 148.11 | NACOF Bengaluru |
| 59 | Tumakuru | Hire Model | Sira | Work In Progress | 304 | NACOF Bengaluru |
| 60 | Tumakuru | Hire Model | Tiptur | Work In Progress | 316.39 | NACOF Bengaluru |
| 61 | Tumakuru | Hire Model | Tumakuru | Work In Progress | 492 | Ashirwad |
| 62 | Udupi | Hire Model | Udupi | Work Order Issued | 1150.29 | Aadarsh Bharat Enviro Pvt Ltd Hadapsar, Pune,Maharashtra |
| 63 | Udupi | Hire Model | Karkala | Work In Progress | 186.58 | K. Ananthakrishna Shetty, Karkala |

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 64 | Uttara Kannada | Hire Model | Bhatkal | Work In Progress | 217.433 | Baseer , Vistara Core |
| 65 | Uttara Kannada | Hire Model | Sirsi | Work In Progress | 729.446 | Baseer , Vistara Core |
| 66 | Uttara Kannada | Hire Model | Yellapura | Work In Progress | 204.249 | Baseer , Vistara Core |
| 67 | Vijayanagara | Hire Model | Hoovina Hadagalli | Work In Progress | 204.8 | Sri Utkarsh BalasahebPatil(Vista core Infraprojects pvt ltd) |
| 68 | Vijayanagara | Hire Model | Hagaribom manahalli | Work In Progress | 186.8 | Sri Utkarsh BalasahebPatil(Vista core Infraprojects pvt ltd) |
| 69 | Vijayanagara | Hire Model | Harapanaha lli | Work In Progress | 195.12 | Sri Utkarsh BalasahebPatil(Vista core Infraprojects pvt ltd) |
| 70 | Vijayanagara | Hire Model | Hospet | Work In Progress | 180.78 | Sri Utkarsh BalasahebPatil(Vista core Infraprojects pvt ltd) |
| 71 | Vijayanagara | Hire Model | Kamalapura m | Work In Progress | 174.77 | Sri Utkarsh BalasahebPatil(Vista core Infraprojects pvt ltd) |
| 72 | Vijayanagara | Hire Model | Kudalagi | Work In Progress | 154.72 | Sri Utkarsh BalasahebPatil(Vista core Infraprojects pvt ltd) |
| 73 | Vijayanagara | Hire Model | Kottur | Work Completed | 152.99 | Sri Utkarsh BalasahebPatil(Vista core Infraprojects pvt ltd) |
| 74 | Vijayapura | Hire Model | Basavana Bagevadi | Work Completed | 162.33 | Neptune automation |
| 75 | Vijayapura | Hire Model | Indi | Work Completed | 219.95 | Neptune automation |
| 76 | Vijayapura | Hire Model | Muddebihal | Work In Progress | 198.44 | Neptune automation |
| 77 | Vijayapura | Hire Model | Sindhagi | Work In Progress | 159.96 | Neptune automation |
| 78 | Vijayapura | Hire Model | Talikote | Work Completed | 140.16 | Neptune automation |

| Sl. No. | District | Type | ULB | Current Status | Amount for which work order is issued (Amount in lakhs) | Contractor Name and Agency |
|---|---|---|---|---|---|---|
| 79 | Vijayapura | Hire Model | Vijayapura | Work Completed | 198.44 | Neptune automation |
| 80 | Yadagiri | Hire Model | Yadgiri | Work Completed | 399.68 | Jan Adhar Sevabhavi Sanstha , Shyam kunj shyam nagar ambajogai road latur-413531 |